# ಕರ್ನಾಟಕ ಸರ್ಕಾರ
# (ವಿದ್ಯುತ್ ಪರಿವೀಕ್ಷಣಾಲಯ)

ಮಾಹಿತಿ ಹಕ್ಕು 2005 ಸೆಕ್ಷನ್ 4 (1) (ಬಿ) ರ ಅನುಗುಣವಾಗಿ ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಪೂರ್ವ ವೃತ್ತ ಕಚೇರಿ ಮಾಹಿತಿ.

1. **ವಿದ್ಯುತ್ ಪರಿವೀಕ್ಷಣಾಲಯ ಇಲಾಖೆಯ ರಚನೆ, ಕಾರ್ಯಗಳು ಮತ್ತು ಕರ್ತವ್ಯಗಳ ವಿವರ:-**
   ವಿದ್ಯುತ್ ಪರಿವೀಕ್ಷಣಾಲಯವು ಕರ್ನಾಟಕ ಸರ್ಕಾರದ ಒಂದು ಇಲಾಖೆಯಾಗಿದ್ದು, ಸದರಿ ಇಲಾಖೆಯು ಇಂಧನ ಇಲಾಖೆಯ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತದೆ. ವಿದ್ಯುತ್ ಪರಿವೀಕ್ಷಣಾಲಯದ ಕೇಂದ್ರ ಕಛೇರಿಯು ನಿರ್ಮಾಣ ಭವನ, 2ನೇ ಮಹಡಿ, ಡಾ॥ ರಾಜ್‌ಕುಮಾರ್ ರಸ್ತೆ, ರಾಜಾಜಿನಗರ, ಬೆಂಗಳೂರು-560010 ವಿಳಾಸದ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿರುತ್ತದೆ. ಸರ್ಕಾರದ ಮುಖ್ಯ ವಿದ್ಯುತ್ ಪರಿವೀಕ್ಷಕರು, ವಿದ್ಯುತ್ ಪರಿವೀಕ್ಷಣಾಲಯದ ಇಲಾಖಾ ಮುಖ್ಯಸ್ಥರಾಗಿರುತ್ತಾರೆ. ಮುಖ್ಯ ವಿದ್ಯುತ್ ಪರಿವೀಕ್ಷಕರ ಅಧೀನದಲ್ಲಿ ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ, ಮೈಸೂರು, ಧಾರವಾಡ, ಕಲಬುರ್ಗಿ ಮತ್ತು ಮಂಗಳೂರು ಎಂಬ ಆರು ವಲಯಗಳಿದ್ದು, ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕರು ಬೆಂಗಳೂರು ಉತ್ತರ ಕಚೇರಿಯು ಒಂದು ವಲಯ ಕಚೇರಿಯಾಗಿರುತ್ತದೆ. ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಉತ್ತರ ರವರು ಬೆಂಗಳೂರು ಉತ್ತರ ವಲಯದ ಮುಖ್ಯಸ್ಥರಾಗಿರುತ್ತಾರೆ. ಬೆಂಗಳೂರು ಉತ್ತರ ವಲಯದ ಕಛೇರಿಯು ನಂ: 2/3 & 2/4, 'ಅರಗಿಣಿ ಭವನ' ಮೊದಲನೇ ಮಹಡಿ, ಡಾ. ರಾಜ್‌ಕುಮಾರ್ ರಸ್ತೆ,ರಾಜಾಜಿನಗರ, ಬೆಂಗಳೂರು-10 ಇಲ್ಲಿ ಕಾರ್ಯ ನಿರ್ವಹಿಸುತ್ತಿರುತ್ತದೆ ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕರು ಬೆಂಗಳೂರು ಉತ್ತರ ವಲಯದ ಅಧೀನದಲ್ಲಿ ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಪೂರ್ವ ವೃತ್ತ ಕಚೇರಿಯು ಕಾರ್ಯ ನಿರ್ವಹಿಸುತ್ತಿದ್ದು, ಈ ಕಚೇರಿ ಕಾರ್ಯವ್ಯಾಪ್ತಿಗೆ ಬೆಸ್ಕಾಂನ ಇ-3, ಇ-4, ಇ-6, ಇ-7, ಇ-10, ಇ-11, ಇ-12, ಸಿ-1, ಸಿ-2, ಸಿ-3 ಮತ್ತು ಸಿ-6 ಉಪ ವಿಭಾಗಳು ಒಳಪಡುತ್ತವೆ. ಈ ಕಚೇರಿಯು ನಂ: 2/3 & 2/4, 'ಅರಗಿಣಿ ಭವನ' ಮೊದಲನೇ ಮಹಡಿ, ಡಾ. ರಾಜ್‌ಕುಮಾರ್ ರಸ್ತೆ,ರಾಜಾಜಿನಗರ, ಬೆಂಗಳೂರು-10 ರ ಖಾಸಿಗಿ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿರುತ್ತದೆ. ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು ಕಚೇರಿ ಮುಖ್ಯಸ್ಥರಾಗಿರುತ್ತಾರೆ. ಅವರ ಅಧೀನದಲ್ಲಿ ಒಂದು ವಿದ್ಯುತ್ ಪರಿವೀಕ್ಷಕರು ವಿಭಾಗೀಯ ಕ್ಷೇತ್ರಿಯ ಅಧಿಕಾರಿ, ಒಂದು ಉಪ ವಿದ್ಯುತ್ ಪರಿವೀಕ್ಷಕರು ಉಪ ವಿಭಾಗೀಯ ಕ್ಷೇತ್ರಿಯ ಅಧಿಕಾರಿ, ಸಹಾಯಕ ವಿದ್ಯುತ್ ಪರಿವೀಕ್ಷಕರುಗಳು ಕಚೇರಿ-1 ಹುದ್ದೆ, ಕ್ಷೇತ್ರಿಯ-3 ಹುದ್ದೆಗಳು, ಅಧೀಕ್ಷಕರು - 1 ಹುದ್ದೆ, ಪ್ರದಸ-1 ಹುದ್ದೆ, ದ್ವಿದಸ-2 ಹುದ್ದೆಗಳು, ಕಂಪ್ಯೂಟರ್ ಆಪರೇಟರ್ -1 ಹುದ್ದೆ, ಸಹಾಯಕ -1 ಹುದ್ದೆ, ವಾಹನ ಚಾಲಕರು-1 ಹುದ್ದೆ ಮತ್ತು ಗ್ರೂಪ್ ಡಿ -1 ಹುದ್ದೆಗಳನ್ನು ಹೊಂದಿರುತ್ತದೆ.

2. **ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಪೂರ್ವ, ಬೆಂಗಳೂರು ಕಚೇರಿ ಮುಖ್ಯ ಧ್ಯೇಯೋದ್ದೇಶಗಳು**
   ವೃತ್ತ ವ್ಯಾಪ್ತಿಯಲ್ಲಿ ಬರುವ ಎಲ್ಲಾ ವಿದ್ಯುತ್ ಸ್ಥಾವರಗಳು, ವಿದ್ಯುತ್ ಪ್ರಸರಣಾ ಮಾರ್ಗಗಳು ಮತ್ತು ವಿತರಣಾ ಕೇಂದ್ರಗಳು ಭಾರತೀಯ ವಿದ್ಯುಚ್ಛಕ್ತಿ ಕಾಯಿದೆ 2003 ಹಾಗೂ ಸೆಂಟ್ರಲ್ ಇಲೆಕ್ಟ್ರಿಸಿಟಿ ಅಥಾರಿಟಿ (ಮೆಸರ್ಸ್ ರಿಲೇಟಿಂಗ್ ಟು ಸೇಫ್ಟಿ ಅಂಡ್ ಎಲೆಕ್ಟ್ರಿಸಿಟಿ ಸಪ್ಲೈ) ರೂಲ್ಸ್ 2010 ಕ್ಕೆ ಅನುಗುಣವಾಗಿ ಸುರಕ್ಷಿತವಾಗಿರುವ ಹಾಗೆ ಕಾಪಾಡಲು ಸೂಕ್ತ ಮಾರ್ಗದರ್ಶನ ನೀಡಿ ವಿದ್ಯುತ್‌ನಿಂದ ಮಾನವನಿಗೆ, ಪ್ರಾಣಿಗಳಿಗೆ ಮತ್ತು ಸಾರ್ವಜನಿಕರ ಆಸ್ತಿ-ಪಾಸ್ತಿಗಳಿಗೆ ಯಾವುದೇ ರೀತಿಯ ಅಪಾಯವಾಗದಂತೆ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳುವ ಬಗ್ಗೆ ವಿದ್ಯುತ್ ಬಳಕೆದಾರರಿಗೆ ಹಾಗೂ ಸರಬರಾಜುದಾರರಿಗೆ ಸಲಹೆ ನೀಡುವುದು.

**ಮೇಲಿನ ಧ್ಯೇಯೋದ್ದೇಶಗಳನ್ನು ಕಾರ್ಯ ರೂಪಕ್ಕೆ ತರಲು ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರ ಕಚೇರಿ, ಬೆಂಗಳೂರು ಪೂರ್ವ ವೃತ್ತದ ಕೆಳಗಿನ ಕರ್ತವ್ಯಗಳನ್ನು ನಿರ್ವಹಿಸುತ್ತದೆ.**

ವಿದ್ಯುತ್ ಬಳಕೆದಾರರ ಮತ್ತು ಸರಬರಾಜುದಾರರು ವಿದ್ಯುತ್ ಸ್ಥಾವರಗಳನ್ನು ಭಾರತೀಯ ವಿದ್ಯುಚ್ಛಕ್ತಿ ಕಾಯಿದೆ 2003 ಹಾಗೂ ಸೆಂಟ್ರಲ್ ಇಲೆಕ್ಟ್ರಿಸಿಟಿ ಅಥಾರಿಟಿ (ಮೆಸರ್ಸ್ ರಿಲೇಟಿಂಗ್ ಟು ಸೇಫ್ಟಿ ಅಂಡ್ ಎಲೆಕ್ಟ್ರಿಸಿಟಿ ಸಪ್ಲೈ) ರೂಲ್ಸ್ 2010ರ ಅನುಗುಣವಾಗಿ ಸ್ಥಾಪಿಸುವುದು ಕಡ್ಡಾಯವಾಗಿರುವುದರಿಂದ ನಿಯಮಗಳ ಪ್ರಕಾರ ವಿದ್ಯುತ್ ಮಾರ್ಗಗಳು, ವಿತರಣಾ ಕೇಂದ್ರಗಳು, ಅಧಿಕ ಒತ್ತಡ ಸ್ಥಾವರ, ವಿದ್ಯುತ್ ಜನಕಗಳು ಮತ್ತು ಬಹುಮಹಡಿ ಕಟ್ಟಡ, ಲಿಫ್ಟ್/ಎಸ್ಕಲೇಟರ್‌ಗಳು, ತಾತ್ಕಾಲಿಕ ವಿದ್ಯುತ್ ಸ್ಥಾವರಗಳನ್ನು ಅನುಮೋದಿತ ನೀಲಿ ನಕ್ಷೆಯ ಪ್ರಕಾರ ಸ್ಥಾಪಿಸುವಂತೆ ತಿಳುವಳಿಕೆ ಹಾಗು ಸಲಹೆ ನೀಡುವುದು.

1. ಬೆಸ್ಕಾಂ ವಿದ್ಯುತ್ ಸರಬರಾಜುದಾರರ ವ್ಯಾಪ್ತಿಯಲ್ಲಿ ಬರುವ ಎಲ್ಲಾ 66ಕೆವಿ ವಿದ್ಯುತ್ ವಿತರಣಾ ಕೇಂದ್ರ ಮತ್ತು ಅದಕ್ಕಿಂತ ಕೆಳಗಿನ ಒತ್ತಡದ ವಿದ್ಯುತ್ ಮಾರ್ಗಗಳ, ಇಹೆಚ್‌ವಿ/ಹೆಚ್‌ವಿ/ಎಮ್‌ವಿ ವಿದ್ಯುತ್ ಮಾರ್ಗಗಳ ನೀಲಿ ನಕ್ಷೆ ಅನುಮೋದನೆ ಮತ್ತು ಪರಿವೀಕ್ಷಣೆ ಹಾಗೂ ಅನುಮೋದನೆ.
2. 2000 ಕೆವಿಎ ರವರೆಗಿನ ಗ್ರಾಹಕರ ವಿದ್ಯುತ್ ಸ್ಥಾವರಗಳ ನೀಲಿ ನಕ್ಷೆ ಅನುಮೋದನೆ ಮತ್ತು ಪರಿವೀಕ್ಷಣೆ ಹಾಗೂ ಅನುಮೋದನೆ,
3. ಎಲ್ಲಾ 24ಮೀಟರ್ ಎತ್ತರದವರೆಗಿನ ಬಹುಮಹಡಿ ಕಟ್ಟಡದಲ್ಲಿ ಸ್ಥಾಪಿಸಲ್ಪಡುವ ಹೊಸ/ನವೀಕರಿಸುವ ಲಿಫ್ಟ್‌ಗಳು/ಎಸ್ಕ್‌ಲೇಟರಗಳು/ಟ್ರ್ಯಾವಲೇಟರ್ಸ್‌ಗಳ ಸ್ಥಾಪನಾ ಅನುಮೋದನೆ ಮತ್ತು ಪರಿವೀಕ್ಷಣೆ ಮತ್ತು ಶಿಫಾರಸ್ಸು.
4. ಎಲ್ಲಾ ಕ್ಷ-ಕಿರಣಗಳು, ನಿಯೋನ್‌ಸೈನ್ಸ್‌ಗಳ ನೀಲಿ ನಕ್ಷೆ ಅನುಮೋದನೆ, ಪರಿವೀಕ್ಷಣೆ ಹಾಗೂ ಅನುಮೋದನೆ.
5. ಎಲ್ಲಾ 24ಮೀಟರ್ ಎತ್ತರದವರೆಗಿನ ಬಹುಮಹಡಿ ಕಟ್ಟಡದಲ್ಲಿ ಅಳವಡಿಸಿರುವ 2000 ಕೆ.ವಿ.ಎ ಸಾಮರ್ಥ್ಯದ ವಿದ್ಯುತ್ ಪರಿವರ್ತಕ ಮತ್ತು ವಿದ್ಯುತ್ ಜನಕಗಳ ಹೆಚ್.ಟಿ/ಎಲ್.ಟಿ ಸಪ್ಲೈ ಇವುಗಳ ನೀಲಿ ನಕ್ಷೆ ಅನುಮೋದನೆ ಮತ್ತು ಪರಿವೀಕ್ಷಣೆ ಹಾಗೂ ಅನುಮೋದನೆ.
6. ಎಲ್ಲಾ ಶಾಶ್ವತ, Renovated Permanent Theatres (ನವೀಕರಣಗೊಳಿಸಿದ ಶಾಶ್ವತ ಚಿತ್ರ ಮಂದಿರ) ಅರೆಶಾಶ್ವತ ಮತ್ತು ತಾತ್ಕಾಲಿಕ ಚಿತ್ರಮಂದಿರಗಳ ಪರಿವೀಕ್ಷಣೆ, ಶಿಫಾರಸ್ಸು, ಹಾಗೂ ಅನುಮೋದನೆ.
7. 100 ಜನರಿಗಿಂತಲೂ ಹೆಚ್ಚಿನ ಜನಸಂದಣಿ ಇರುವಂತಹ ಸಮಾರೋಪ ಸಮಾರಂಭಗಳಲ್ಲಿ ಅಳವಡಿಸಿರುವ ತಾತ್ಕಾಲಿಕ ವಿದ್ಯುತ್ ಸ್ಥಾವರಗಳ ಪರಿವೀಕ್ಷಣೆ ಮತ್ತು ಅನುಮೋದನೆ.
8. 8 ಜನ ಮಾನವರನ್ನೊಳಗೊಂಡ ಮಾರಕ (ಮರಣಾಂತಿಕ), ಎಲ್ಲಾ ಪ್ರಾಣಿಗಳಿಗೆ ಮಾರಕ, ಮಾನವರಿಗೆ ಅಮರಣಾಂತಿಕ ವಿದ್ಯುತ್ ಅಪಘಾತಗಳ ತನಿಖೆ ನಡೆಸುವುದು ಮತ್ತು ಸರ್ಕಾರಕ್ಕೆ ತನಿಖಾ ವರದಿಯನ್ನು ಸಲ್ಲಿಸುವುದು.
9. ಅಧಿಕಾರಿಗಳ ಕಾರ್ಯವ್ಯಾಪ್ತಿಗೆ ಬರುವ ಎಲ್ಲಾ ವಿದ್ಯುತ್ ಮಾಪನಗಳ ಖಚಿತತೆ ಬಗ್ಗೆ ನಡೆಯುವ ತಪಾಸಣೆಯಲ್ಲಿ ಸಾಕ್ಷಿಕರಿಸುವುದು.
10. ಈ ಇಲಾಖೆಯ ಭಾರತೀಯ ವಿದ್ಯುಚ್ಛಕ್ತಿ ಕಾಯಿದೆ 2003 ಹಾಗೂ ಸೆಂಟ್ರಲ್ ಇಲೆಕ್ಟ್ರಿಸಿಟಿ ಅಥಾರಿಟಿ (ಮೆಸರ್ಸ್ ರಿಲೇಟಿಂಗ್ ಟು ಸೇಫ್ಟಿ ಅಂಡ್ ಎಲೆಕ್ಟ್ರಿಸಿಟಿ ಸಪ್ಲೈ) ರೂಲ್ಸ್ 2010 ರ ಪ್ರಕಾರ ಎಲ್ಲಾ ವಿದ್ಯುತ್ ಸ್ಥಾವರಗಳ ನಿಯತಕಾಲಿಕ ಪರಿವೀಕ್ಷಣೆಯನ್ನು ಕರ್ನಾಟಕ ಸರಕಾರ ಇಂಧನ ಇಲಾಖೆ ಅಧಿಸೂಚನೆ ಸಂ.ಇ.ಎನ್ 5 ಇ.ಬಿ.ಎಸ್ 2012 ದಿ: 12.09.2013ರ ಅಧಿಕಾರಿಗಳ ಕಾರ್ಯಗಳ ಪ್ರತ್ಯಾಯೋಜನೆಯ ಪ್ರಕಾರ ಆಯಾ ಅಧಿಕಾರಿಗಳು ಅವರವರ ಕಾರ್ಯವ್ಯಾಪ್ತಿ ಮತ್ತು ಅಧಿಕಾರ ವ್ಯಾಪ್ತಿಯ ಅನುಸಾರವಾಗಿ ನಡೆಸುತ್ತಾರೆ.

11. ಈ ಇಲಾಖೆಯು ಭಾರತೀಯ ವಿದ್ಯುಚ್ಛಕ್ತಿ ಕಾಯಿದೆ 2003 ಹಾಗೂ ಸೆಂಟ್ರಲ್ ಇಲೆಕ್ಟ್ರಿಸಿಟಿ ಅಥಾರಿಟಿ (ಮೆಸರ್ಸ್ ರಿಲೆಟಿಂಗ್ ಟು ಸೇಫ್ಟಿ ಅಂಡ್ ಎಲೆಕ್ಟ್ರಿಸಿಟಿ ಸಪ್ಲೈ) ರೂಲ್ಸ್ 2010 ರ ಪ್ರಕಾರ ಅಗತ್ಯವಿರುವ ಕರ್ನಾಟಕ (ವಿದ್ಯುತ್ ಗುತ್ತಿಗೆದಾರರು, ವಿಶೇಷ ತಂತಿರಹದಾರಿ ಅನುಮತಿ ಮತ್ತು ಮೇಲ್ವಿಚಾರಕರು ಮತ್ತು ವೈರ್‌ಮನ್‌ಗಳ ಪರವಾನಿಗೆ ಮತ್ತು ಅನುಮತಿ) ನಿಯಮಗಳು 2012 ಅನ್ನು ಜಾರಿಗೊಳಸಿರುತ್ತದೆ. ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಪೂರ್ವ ರವರ ವ್ಯಾಪ್ತಿಗೆ ಬರುವ ಉಪ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಪೂರ್ವರವರು ಈ ನಿಯಮಾನುಸಾರ ಈ ಕಚೇರಿ ವ್ಯಾಪ್ತಿಗೆ ಸಂಬಂಧಪಟ್ಟ ಅರ್ಜಿಗಳನ್ನು "ಇ-ಸುರಕ್ಷಾ" ಪೋರ್ಟಲ್ ಮೂಲಕ ಸ್ವೀಕರಿಸಿ ಸರ್ಕಾರದ ಮುಖ್ಯ ವಿದ್ಯುತ್ ಪರಿವೀಕ್ಷಕರ ಕಛೇರಿ, ಬೆಂಗಳೂರಿಗೆ ಆನ್ ಲೈನ್ ಮೂಲಕ ರವಾನೆ ಮಾಡಲಾಗುವುದು. ಹಾಗೂ ಆನ್ ಲೈನ್ ಮೂಲಕ ಈ ಕಚೇರಿ ಹಂತದಲ್ಲಿ ಮೇಲ್ವಿಚಾರಕರ ಮತ್ತು ತಂತಿ ರಹದಾರಿ ಹಿಂಬರಹಗೊಳಸುವುದು.
12. ಸಿನೆಮಾ ಆಪರೇಟರ್‌ಗಳ ಪರವಾನಗಿಗಳನ್ನು ನವೀಕರಣ/ಹಿಂಬರಹವನ್ನು ಆಯಾ ವಿಭಾಗವಾರು ಕಛೇರಿಗಳಲ್ಲಿ ಮಾಡಲಾಗುವುದು.

**3. ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರ ಕಚೇರಿ, ಬೆಂಗಳೂರು ಪೂರ್ವ ಕಛೇರಿಯ ಅಧಿಕಾರಿಗಳ ಮತ್ತು ನೌಕರರ ಅಧಿಕಾರಿಗಳ ಕರ್ತವ್ಯಗಳು:-**

**ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಪೂರ್ವ**

ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರವರು ಬೆಂಗಳೂರು ಪೂರ್ವ ವೃತ್ತಕ್ಕೆ ಮುಖ್ಯಸ್ಥರಾಗಿರುತ್ತಾರೆ ಹಾಗೂ ಅಧಿಕಾರ ಪ್ರತ್ಯಾಯೋಜನೆಯಂತೆ ಈ ಕೆಳಕಂಡ ಕರ್ತವ್ಯಗಳನ್ನು ನಿರ್ವಹಿಸುತ್ತಿರುತ್ತಾರೆ.

1. 33ಕೆವಿಗಿಂತ ಮೇಲ್ಪಟ್ಟ ಮತ್ತು 66ಕೆವಿ ವರೆಗಿನ ವಿತರಣಾ ಕೇಂದ್ರಗಳ ಮತ್ತು ಮಾರ್ಗಗಳ, ಹೆಚ್.ಟಿ 24ಮೀಟರ್ ಎತ್ತರದವರೆಗಿನ ಬಹುಮಹಡಿ ಕಟ್ಟಡಗಳು ಮತ್ತು ಅದರಲ್ಲಿನ 2000ಕೆವಿಎ ವರೆಗಿನ ಗ್ರಾಹಕರ ವಿದ್ಯುತ್ ಸ್ಥಾವರದಲ್ಲಿ ಹೊಂದಿರುವ ವಿದ್ಯುತ್ ಪರಿವರ್ತಕ ಮತ್ತು ವಿದ್ಯುತ್ ಜನಕಗಳ, ಎಲ್.ಟಿ 18ಮೀಟರ್‌ಗಿಂತ ಮೇಲ್ಪಟ್ಟ ಮತ್ತು 24ಮೀಟರ್ ಎತ್ತರದವರೆಗಿನ ಬಹುಮಹಡಿ ಕಟ್ಟಡಗಳು ಮತ್ತು ಅದರಲ್ಲಿನ 100ಕೆವಿಎ ಗಿಂತ ಮೇಲ್ಪಟ್ಟ ಮತ್ತು 2000ಕೆವಿಎವರೆಗಿನ ವಿದ್ಯುತ್ ಪರಿವರ್ತಕ ಮತ್ತು ವಿದ್ಯುತ್ ಜನಕಗಳ, ಗ್ರಾಹಕರ ಹೆಚ್.ಟಿ 500ಕೆವಿಎ ಗಿಂತ ಮೇಲ್ಪಟ್ಟ ಮತ್ತು 2000ಕೆವಿಎವರೆಗಿನ ವಿದ್ಯುತ್ ಪರಿವರ್ತಕ ಮತ್ತು ವಿದ್ಯುತ್ ಜನಕಗಳ, ಹೆಚ್.ಟಿ/ಎಲ್.ಟಿ 24ಮೀಟರ್ ಮೇಲ್ಪಟ್ಟ ಎತ್ತರದವರೆಗಿನ ಬಹುಮಹಡಿ ಕಟ್ಟಡಗಳು ಮತ್ತು ಅದರಲ್ಲಿನ 2000ಕೆವಿಎ ವರೆಗಿನ ಗ್ರಾಹಕರ ವಿದ್ಯುತ್ ಪರಿವರ್ತಕ ಮತ್ತು ವಿದ್ಯುತ್‌ಜನಕಗಳ, ವಿದ್ಯುತ್ ಸ್ಥಾವರದಲ್ಲಿ ಹೊಂದಿರುವ ಲಿಫ್ಟ್/ಎಸ್ಕಲೇಟರ್ಸ್‌ನ, ನವೀಕರಣಗೊಳಸಿದ ಚಿತ್ರಮಂದಿರಗಳ, ನೀಲಿನಕ್ಷೆ ಅನುಮೋದನೆ ಮತ್ತು ಪ್ರಾಥಮಿಕ ಪರಿವೀಕ್ಷಣೆ ಮಾಡುವುದು. 500ಕೆವಿಎ ಗಿಂತ ಮೇಲ್ಪಟ್ಟ ಮತ್ತು 2000ಕೆವಿಎ ವರೆಗಿನ ಟ್ರೇಡ್ ಫೇರ್, ಪ್ರದರ್ಶನಗಳ ತಾತ್ಕಾಲಿಕ ವಿದ್ಯುತ್ ಸ್ಥಾವರಗಳ ಪರಿವೀಕ್ಷಣೆ ಮಾಡುವುದು.
2. 66ಕೆವಿಗಿಂತ ಮೇಲ್ಪಟ್ಟ ಮತ್ತು 110ಕೆವಿ ವರೆಗಿನ ವಿತರಣಾ ಕೇಂದ್ರಗಳು ಮತ್ತು ವಿದ್ಯುತ್ ಮಾರ್ಗಗಳು, 1500ಕಿ.ವ್ಯಾ ಸಾಮರ್ಥ್ಯದವರೆಗಿನ ಎಲ್ಲಾ ಗಾಳಿ ವಿದ್ಯುತ್ ಉತ್ಪಾದನಾ ಕೇಂದ್ರಗಳು, 20 ಮೆ.ವ್ಯಾ ಸಾಮರ್ಥ್ಯರವರೆಗಿನ ಎಲ್ಲಾ ವಿದ್ಯುತ್ ಉತ್ಪಾದನಾ ಕೇಂದ್ರಗಳು, 3000ಕೆವಿಎ ಗಿಂತ ಮೇಲ್ಪಟ್ಟ ಮತ್ತು 15000ಕೆವಿಎವರೆಗಿನ ಗ್ರಾಹಕರ ಅಧಿಕ ಒತ್ತಡ ಪರಿವರ್ತಕ ಮತ್ತು ವಿದ್ಯುತ್ ಜನಕಗಳು, ಎಲ್ಲಾ ಶಾಶ್ವತ ಚಿತ್ರಮಂದಿರಗಳು, ಹೆಚ್.ಟಿ ಸಪ್ಲೈ ನ 24ಮೀಟರ್ ವರೆಗಿನ ಬಹುಮಹಡಿ ಕಟ್ಟಡಗಳ ನಿಯತಕಾಲಿಕ ಪರಿವೀಕ್ಷಣೆ ಮಾಡುವುದು, ವಿದ್ಯುತ್ ಪರಿವೀಕ್ಷಕರಿಂದ ಶಿಫಾರಸ್ಸಾದ ಚಿತ್ರ ಮಂದಿರಗಳಿಗೆ ವಿದ್ಯುತ್ ಯೋಗ್ಯತಾ ಪತ್ರ ನೀಡುವುದು.

3. 5 ಜನರಿಗಿಂತ ಹೆಚ್ಚಿನ ಮತ್ತು 8 ಜನರನ್ನೊಳಗೊಂಡು ಸಂಭವಿಸಿದಂತಹ ಮರಣಾಂತಿಕ ವಿದ್ಯುತ್ ಅಪಘಾತಗಳನ್ನು ತನಿಖೆ ಮಾಡಿ, ಸದರಿ ಅಪಘಾತಗಳ ವರದಿಯನ್ನು ಅಮುವಿಪರವರಿಗೆ ಸಲ್ಲಿಸುವುದು, ಮತ್ತು ವಿಪ (ವಿಭಾಗವಾರು) ರವರು ಸಲ್ಲಿಸಿದ 1 ಜನರಿಗಿಂತ ಅಧಿಕ ಮತ್ತು 5 ಜನ ಮಾನವರನ್ನೊಳಗೊಂಡ ಮಾರಣಾಂತಿಕ ವಿದ್ಯುತ್ ಅಪಘಾತಗಳ, ಬೆಂಕಿ ಅಪಘಾತಗಳ ಮತ್ತು ಆನೆಗಳಿಗೆ ಸಂಭವಿಸಿದಂತಹ ಮರಣಾಂತಿಕ ವಿದ್ಯುತ್ ಅಪಘಾತಗಳ ತನಿಖಾ ವಿವರಗಳ ಆಧಾರದ ಮೇಲೆ ಅಂತಿಮ ವರದಿ ತಯಾರಿಸಿ ಸರ್ಕಾರಕ್ಕೆ ಸಲ್ಲಿಸುವುದು.
4. ಮೇಲೆ ನಮೂದಿಸಿದ ಕಾರ್ಯಗಳಲ್ಲದೆ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು, ಅಪರ ಮುಖ್ಯ ವಿದ್ಯುತ್ ಪರಿವೀಕ್ಷರು, ಬೆಂಗಳೂರು ಉತ್ತರ ರವರು ಸೂಚಿಸುವ ಇತರೆ ಕಾರ್ಯಗಳನ್ನು ನಿರ್ವಹಿಸುವುದು ಮತ್ತು ವೃತ್ತ ಕಛೇರಿ ವ್ಯಾಪ್ತಿಗೆ ಬರುವಂತಹ ಎಲ್ಲಾ ಕಾರ್ಯಗಳು ಸಮಯಕ್ಕೆ ಸರಿಯಾಗಿ, ಸುಸೂತ್ರವಾಗಿ ನಡೆಯುವ ಕುರಿತು ನಿಗಾವಹಿಸುವುದು.
5. ಕಾರ್ಯವ್ಯಾಪ್ತಿಯ ತಾಂತ್ರಿಕ ವಿಷಯಕ್ಕೆ ಸಂಬಂಧಿಸಿದಂತೆ ವೃತ್ತದ ಮಾಹಿತಿ ಹಕ್ಕು ಅಧಿನಿಯಮದ ಪ್ರಥಮ ಅಪೀಲು ಅಧಿಕಾರಿಯಾಗಿರುತ್ತಾರೆ.

**ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಪೂರ್ವ :-**

ವಿದ್ಯುತ್ ಪರಿವೀಕ್ಷಕರವರು ಬೆಂಗಳೂರು ಪೂರ್ವ ವೃತ್ತ ವ್ಯಾಪ್ತಿಯ ಅಧಿಕಾರ ಪ್ರತ್ಯಾಯೋಜನೆಯಂತೆ ಈ ಕೆಳಕಂಡ ಕರ್ತವ್ಯಗಳನ್ನು ನಿರ್ವಹಿಸುತ್ತಿರುತ್ತಾರೆ.

1. 11ಕೆವಿಗಿಂತ ಮೇಲ್ಪಟ್ಟ ಮತ್ತು 33ಕೆವಿ ವರೆಗಿನ ವಿತರಣಾ ಕೇಂದ್ರಗಳ ಮತ್ತು ಮಾರ್ಗಗಳ, ಎಲ್.ಟಿ 18ಮೀಟರ್ ಎತ್ತರದವರೆಗಿನ ಬಹುಮಹಡಿ ಕಟ್ಟಡಗಳು ಮತ್ತು ಅದರಲ್ಲಿನ 100ಕೆವಿಎ ವರೆಗಿನ ವಿದ್ಯುತ್ ಪರಿವರ್ತಕ ಮತ್ತು ವಿದ್ಯುತ್ ಜನಕಗಳ, ಗ್ರಾಹಕರ ಹೆಚ್.ಟಿ 200ಕೆವಿಎ ಗಿಂತ ಮೇಲ್ಪಟ್ಟ ಮತ್ತು 500ಕೆವಿಎ ವರೆಗಿನ ವಿದ್ಯುತ್ ಪರಿವರ್ತಕ ಮತ್ತು ಗ್ರಾಹಕರ 150ಕೆವಿಎ ಗಿಂತ ಮೇಲ್ಪಟ್ಟ ಮತ್ತು 500ಕೆವಿಎ ವರೆಗಿನ ವಿದ್ಯುತ್ ಜನಕಗಳ, ಅರೆ ಶಾಶ್ವತ ಚಿತ್ರ ಮಂದಿರಗಳ, ನೀಲಿನಕ್ಷೆ ಅನುಮೋದನೆ ಮತ್ತು ಪ್ರಾಥಮಿಕ ಪರಿವೀಕ್ಷಣೆ ಮಾಡುವುದು. 500ಕೆವಿಎ ಗಿಂತ ಮೇಲ್ಪಟ್ಟ ಮತ್ತು ತಾತ್ಕಾಲಿಕ ವಿದ್ಯುತ್ ಸ್ಥಾವರಗಳ ಪರಿವೀಕ್ಷಣೆ ಮಾಡುವುದು. 25ಕಿ.ವ್ಯಾ ಗಿಂತ ಮೇಲ್ಪಟ್ಟ ಮತ್ತು 500ಕೆವಿಎ ವರೆಗಿನ ಟ್ರೇಡ್ ಫೇರ್, ಪ್ರದರ್ಶನಗಳ ತಾತ್ಕಾಲಿಕ ವಿದ್ಯುತ್ ಸ್ಥಾವರಗಳ ಪರಿವೀಕ್ಷಣೆ, ಅತೀ ಗಣ್ಯರ ಭೇಟಿ, ಸಾರ್ವಜನಿಕ ಸಮಾರಂಭಗಳಿಗೆ ವಿದ್ಯುತ್ ಯೋಗ್ಯತಾ ಪತ್ರ ನೀಡುವುದು.
2. 33ಕೆವಿಗಿಂತ ಮೇಲ್ಪಟ್ಟ ಮತ್ತು 66ಕೆವಿ ವರೆಗಿನ ವಿತರಣಾ ಕೇಂದ್ರಗಳ, 350ಕೆವಿಎ ಗಿಂತ ಮೇಲ್ಪಟ್ಟ ಮತ್ತು 3000ಕೆವಿಎ ವರೆಗಿನ ಗ್ರಾಹಕರ ಅಧಿಕ ಒತ್ತಡ ಪರಿವರ್ತಕ, ವಿದ್ಯುತ್ ಜನಕಗಳು, ಎಲ್ಲಾ ಅರೆಶಾಶ್ವತ ಚಿತ್ರಮಂದಿರಗಳ, ಎಲ್.ಟಿ ಸಪ್ಲೈ ನ 24ಮೀಟರ್ ವರೆಗಿನ ಬಹುಮಹಡಿ ಕಟ್ಟಡಗಳ ನಿಯತ ಕಾಲಿಕ ಪರಿವೀಕ್ಷಣೆ ಮಾಡುವುದು.
3. ಒಂದಕ್ಕಿಂತ ಹೆಚ್ಚಿನ ಮತ್ತು 5 ಜನರನ್ನೊಳಗೊಂಡು ಸಂಭವಿಸಿದಂತಹ ಮರಣಾಂತಿಕ ವಿದ್ಯುತ್ ಅಪಘಾತಗಳು, ಬೆಂಕಿ ಅಪಘಾತಗಳ ಮತ್ತು ಆನೆಗಳಿಗೆ ಸಂಭವಿಸಿದಂತಹ ಮರಣಾಂತಿಕ ವಿದ್ಯುತ್ ಅಪಘಾತಗಳನ್ನು ತನಿಖೆ ಮಾಡಿ, ಸದರಿ ಅಪಘಾತಗಳ ವರದಿಯನ್ನು ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಪೂರ್ವ ರವರಿಗೆ ಸಲ್ಲಿಸುವುದು, ಮತ್ತು ಉಪ ವಿದ್ಯುತ್ ಪರಿವೀಕ್ಷಕರು ಬೆಂಗಳೂರು ಪೂರ್ವ ರವರು ಸಲ್ಲಿಸಿದ ಒಬ್ಬ ಮಾನವನಿಗೆ ಸಂಭವಿಸಿದ ಮರಣಾಂತಿಕ ವಿದ್ಯುತ್ ಅಪಘಾತ ಮತ್ತು ಮಾನವನಿಗೆ ಸಂಭವಿಸಿದ ಮರಣಾಂತಿಕವಲ್ಲದ ವಿದ್ಯುತ್ ಅಪಘಾತದ ತನಿಖಾ ವಿವರಗಳ ಆಧಾರದ ಮೇಲೆ ಅಂತಿಮ ವರದಿಯನ್ನು ಸರ್ಕಾರಕ್ಕೆ ಸಲ್ಲಿಸುವುದು.
4. ಮೇಲೆ ನಮೂದಿಸಿದ ಕಾರ್ಯಗಳಲ್ಲದೆ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು, ಅಪರ ಮುಖ್ಯ ವಿದ್ಯುತ್ ಪರಿವೀಕ್ಷರು, ಬೆಂಗಳೂರು ಉತ್ತರ, ಉಪ ಮುಖ್ಯ ವಿದ್ಯುತ್ ಪರಿವೀಕ್ಷರು, ಬೆಂಗಳೂರು ಪೂರ್ವ ರವರು ಸೂಚಿಸುವ ಇತರೆ ಕಾರ್ಯಗಳನ್ನು ನಿರ್ವಹಿಸುವುದು ಮತ್ತು ಈ

ಕಛೇರಿ ವ್ಯಾಪ್ತಿಗೆ ಬರುವಂತಹ ಎಲ್ಲಾ ಕಾರ್ಯಗಳು ಸಮಯಕ್ಕೆ ಸರಿಯಾಗಿ, ಸುಸೂತ್ರವಾಗಿ ನಡೆಯುವ ಕುರಿತು ನಿಗಾವಹಿಸುವುದು.

5. ಕಾರ್ಯ ವ್ಯಾಪ್ತಿಯಲ್ಲಿ ಬರುವಂತಹ ಸಿನೆಮಾ ಆಪರೇಟರ್‌ಗಳ ಪರವಾನಿಗೆಗಳನ್ನು ನವೀಕರಣ/ಹಿಂಬರಹವನ್ನು ಮಾಡುವುದು.
6. ಕಾರ್ಯವ್ಯಾಪ್ತಿಯ ತಾಂತ್ರಿಕ ವಿಷಯಕ್ಕೆ ಸಂಬಂಧಿಸಿದಂತೆ ಸಾರ್ವಜನಿಕ ಮಾಹಿತಿ ಅಧಿಕಾರಿಯಾಗಿರುತ್ತಾರೆ.

**ಉಪ ವಿದ್ಯುತ್ ಪರಿವೀಕ್ಷಕರು ಬೆಂಗಳೂರು ಪೂರ್ವ:-**

ಉಪ ವಿದ್ಯುತ್ ಪರಿವೀಕ್ಷಕರವರು ಬೆಂಗಳೂರು ಪೂರ್ವ ವೃತ್ತ ವ್ಯಾಪ್ತಿಯ ಅಧಿಕಾರ ಪ್ರತ್ಯಾಯೋಜನೆಯಂತೆ ಈ ಕೆಳಕಂಡ ಕರ್ತವ್ಯಗಳನ್ನು ನಿರ್ವಹಿಸುತ್ತಿರುತ್ತಾರೆ.

1. 11ಕೆವಿ ವರೆಗಿನ ವಿತರಣಾ ಕೇಂದ್ರಗಳ ಮತ್ತು ಮಾರ್ಗಗಳ, ಗ್ರಾಹಕರ ಹೆಚ್.ಟಿ 200ಕೆವಿಎ ವರೆಗಿನ ವಿದ್ಯುತ್ ಪರಿವರ್ತಕ ಮತ್ತು ಗ್ರಾಹಕರ 150ಕೆವಿಎ ವರೆಗಿನ ವಿದ್ಯುತ್ ಜನಕಗಳ, ಟೂರಿಂಗ್ ಟಾಕೀಸ್‌ಗಳ, ಎಲ್ಲಾ ಎಕ್ಸ್ ರೇ ಗಳ, ನೀಲನಕ್ಷೆ ಅನುಮೋದನೆ ಮತ್ತು ಪ್ರಾಥಮಿಕ ಪರಿವೀಕ್ಷಣೆ ಮಾಡುವುದು, 25ಕಿ.ವ್ಯಾ ವರೆಗಿನ ಸರ್ಕಸ್, ನಾಟಕ, ದೀಪಾವಳ, ಗಣೇಶ ಹಬ್ಬಗಳಲ್ಲಿ ಅಳವಡಿಸಿದ ತಾತ್ಕಾಲಿಕ ವಿದ್ಯುತ್ ಸ್ಥಾವರಗಳ ಪರಿವೀಕ್ಷಣೆಮಾಡುವುದು.
2. 11ಕೆವಿಗಿಂತ ಮೇಲ್ಪಟ್ಟ ಮತ್ತು 33ಕೆವಿ ವರೆಗಿನ ವಿತರಣಾ ಕೇಂದ್ರಗಳ, 25ಕೆವಿಎ ಗಿಂತ ಮೇಲ್ಪಟ್ಟ ಮತ್ತು 350ಕೆವಿಎ ವರೆಗಿನ ಗ್ರಾಹಕರ ಅಧಿಕ ಒತ್ತಡ ಪರಿವರ್ತಕ, 25ಕೆವಿಎ ಗಿಂತ ಮೇಲ್ಪಟ್ಟ ಮತ್ತು 350ಕೆವಿಎ ವರೆಗಿನ ಗ್ರಾಹಕರ ವಿದ್ಯುತ್ ಜನಕಗಳ, ಎಲ್ಲಾ ತಾತ್ಕಾಲಿಕ ಸಿನೆಮಾಗಳ, ಎಲ್.ಟಿ ಸಪ್ಲೈ ನ 15ಮೀಟರ್‌ಗಿಂತ ಹೆಚ್ಚಿನ ಮತ್ತು 24ಮೀಟರ್ ವರೆಗಿನ ಬಹುಮಹಡಿ ಕಟ್ಟಡಗಳ ಮತ್ತು ಅವುಗಳಲ್ಲಿನ ಲಿಫ್ಟ್‌ಗಳ, ಮತ್ತು ಎಲ್ಲಾ ಎಕ್ಸ್ ರೇ ಗಳ ನಿಯತಕಾಲಿಕ ಪರಿವೀಕ್ಷಣೆ ಮಾಡುವುದು.
3. ಒಬ್ಬ ಮಾನವನಿಗೆ ಸಂಭವಿಸಿದ ಮರಣಾಂತಿಕ ಮತ್ತು ಮರಣಾಂತಿಕವಲ್ಲದ ವಿದ್ಯುತ್ ಅಪಘಾತಗಳ ತನಿಖೆ ಮಾಡಿ, ಸದರಿ ಅಪಘಾತಗಳ ವರದಿಯನ್ನು ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಹೆಚ್ಚುವರಿ ಪೂರ್ವ ರವರಿಗೆ ಸಲ್ಲಿಸುವುದು ಮತ್ತು ಸವಿಪ ರವರು ಸಲ್ಲಿಸಿದ ಪ್ರಾಣಿಗಳಿಗೆ ಸಂಭವಿಸಿದ ಮರಣಾಂತಿಕ ವಿದ್ಯುತ್ ಅಪಘಾತದ ತನಿಖಾ ವಿವರಗಳ ಆಧಾರದ ಮೇಲೆ ಅಂತಿಮ ವರದಿ ತಯಾರಿಸಿ ಸರ್ಕಾರಕ್ಕೆ ಸಲ್ಲಿಸುವುದು.
4. ಮೇಲೆ ನಮೂದಿಸಿದ ಕಾರ್ಯಗಳಲ್ಲದೆ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು, ಅಪರ ಮುಖ್ಯ ವಿದ್ಯುತ್ ಪರಿವೀಕ್ಷರು, ಬೆಂಗಳೂರು ಉತ್ತರ, ಉಪ ಮುಖ್ಯ ವಿದ್ಯುತ್ ಪರಿವೀಕ್ಷರು, ಬೆಂಗಳೂರು ಪೂರ್ವ, ವಿದ್ಯುತ್ ಪರಿವೀಕ್ಷರು, ಬೆಂಗಳೂರು ಪೂರ್ವ ರವರು ಸೂಚಿಸುವ ಇತರೆ ಕಾರ್ಯಗಳನ್ನು ನಿರ್ವಹಿಸುವುದು ಮತ್ತು ಸವಿಪ ರವರ ವ್ಯಾಪ್ತಿಗೆ ಬರುವಂತಹ ಎಲ್ಲಾ ಕಾರ್ಯಗಳು ಸಮಯಕ್ಕೆ ಸರಿಯಾಗಿ, ಸುಸೂತ್ರವಾಗಿ ನಡೆಯುವ ಕುರಿತು ನಿಗಾವಹಿಸುವುದು.
5. "ಇ-ಸುರಕ್ಷಾ" ಪೋರ್ಟಲ್ ಮೂಲಕ ಹೊಸದಾಗಿ ಸಲ್ಲಿಸಿರುವ ವಿದ್ಯುತ್ ಗುತ್ತಿಗೆದಾರರ ಪರವಾನಗಿ ಅರ್ಜಿ, ವಿದ್ಯುತ್ ಮೇಲ್ವಿಚಾರಕರ ಮತ್ತು ತಂತಿ ಕೆಲಸಗಾರರ ಅರ್ಜಿಗಳನ್ನು ಪರಿಶೀಲಿಸುವುದು ಮತ್ತು ಎಲ್ಲಾ ಅರ್ಜಿಗಳನ್ನು ಕೇಂದ್ರ ಕಚೇರಿಗೆ (ಲೈಸೆನ್ಸಿಂಗ್ ಬೋರ್ಡ್) ಗೆ ಸಲ್ಲಿಸಲು ಕ್ರಮ ಕೈಗೊಳ್ಳುವುದು. ಮತ್ತು ಆನ್ ಲೈನ್ ಮೂಲಕ ವಿದ್ಯುತ್ ಮೇಲ್ವಿಚಾರಕರ ಮತ್ತು ತಂತಿ ರಹದಾರಿ ಹಿಂಬರಹಗೊಳಿಸುವುದು. ಇವರಿಗೆ ತಾಂತ್ರಿಕ ವಿಷಯದಲ್ಲಿ ಸವಿಪ ಮತ್ತು ಆಡಳಿತ ವಿಷಯದಲ್ಲಿ ಪ್ರದಸ ಮತ್ತು ದ್ವಿದಸರವರು ಸಹಾಯಕರಾಗಿ ಕಾರ್ಯ ನಿರ್ವಹಿಸುತ್ತಾರೆ.
6. ಕಾರ್ಯವ್ಯಾಪ್ತಿಯ ತಾಂತ್ರಿಕ ವಿಷಯಕ್ಕೆ ಸಂಬಂಧಿಸಿದಂತೆ ಸಾರ್ವಜನಿಕ ಮಾಹಿತಿ ಅಧಿಕಾರಿಯಾಗಿರುತ್ತಾರೆ.

**ಸಹಾಯಕ ವಿದ್ಯುತ್ ಪರಿವೀಕ್ಷಕರು 1, 2& 3 (ಕ್ಷೇತ್ರಿಯ):-**

ಸವಿಪ ಕ್ಷೇತ್ರಿಯ ರವರುಗಳು ಉಪ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಪೂರ್ವ ರವರ ಮಾರ್ಗದರ್ಶನ ಮತ್ತು ಮೇಲ್ವಿಚಾರಣೆಯಲ್ಲಿ ಬೆಂಗಳೂರು ಪೂರ್ವ ವೃತ್ತ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುತ್ತಾರೆ. ಸವಿಪ ಕ್ಷೇತ್ರಿಯ ರವರ ಅಧಿಕಾರ ಪ್ರತ್ಯಾಯೊಜನೆಯಂತೆ ತಮ್ಮ ತಮ್ಮ ವ್ಯಾಪ್ತಿಯಲ್ಲಿ ಬರುವಂತಹ ಸಿಸ್ಟಂ ವೋಲ್ಟೇಜ್ 11ಕೆ.ವಿ ವರೆಗಿನ ವಿದ್ಯುತ್ ಸ್ಥಾವರಗಳು, ಎಲ್ಲಾ ನಿಯಾನ್ ಸೈನ್ಸ್‌ಗಳ, ಮತ್ತು ಎಲ್ಲಾ ಡಿಸ್ಟ್ರಿಬ್ಯೂಷನ್ ಪರಿವರ್ತಕ ಕೇಂದ್ರಗಳ, 25ಕೆ.ವಿ.ಎ ವರೆಗಿನ ವಿದ್ಯುತ್ ಜನಕಗಳ, ನಿಯಾನ್ ಸೈನ್ಸ್‌ಗಳ, ನಿಯತಕಾಲಿಕ ಪರಿವೀಕ್ಷಣೆಗಳನ್ನು ಮತ್ತು ಪ್ರಾಣಿಗಳಿಗೆ (ಆನೆಗಳನ್ನು ಹೊರತುಪಡಿಸಿ) ಸಂಭಂಧಿಸಿದಂತಹ ಮರಣಾಂತಿಕ ವಿದ್ಯುತ್ ಅಪಘಾತಗಳ ತನಿಖೆಯನ್ನು ಕೈಗೊಂಡು ಉಪ ವಿದ್ಯುತ್ ಪರಿವೀಕ್ಷಕರವರಿಗೆ ವರದಿಯನ್ನು ಸಲ್ಲಿಸುವದು ಅವರ ಕರ್ತವ್ಯಗಳಾಗಿರುತ್ತವೆ. ಅವರುಗಳ ಕಾರ್ಯವ್ಯಾಪ್ತಿಯ ತಾಂತ್ರಿಕ ಕಡತಗಳ ಸಂರಕ್ಷಣೆಯ ಉಸ್ತುವಾರಿಯನ್ನು ನಿರ್ವಹಿಸುತ್ತಿರುತ್ತಾರೆ.

**ಸಹಾಯಕ ವಿದ್ಯುತ್ ಪರಿವೀಕ್ಷಕರು (ಕಛೇರಿ):-**

ಸಹಾಯಕ ವಿದ್ಯುತ್ ಪರಿವೀಕ್ಷಕರು (ಕಛೇರಿ) ರವರು ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರರವರಿಗೆ ವೃತ್ತದ ತಾಂತ್ರಿಕ ವಿಷಯದಲ್ಲಿ ಸಹಾಯಕರಾಗಿರುತ್ತಾರೆ. ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರ ಕಾರ್ಯ ವ್ಯಾಪ್ತಿಯಲ್ಲಿ ಬರುವಂತಹ ವಿದ್ಯುತ್ ಸ್ಥಾವರಗಳ ನಕ್ಷೆ ಅನುಮೋದನೆ ಮತ್ತು ಚಾಲನಾ ಅನುಮೋದನೆಗಳ ಕಡತಗಳನ್ನು ಪರಿಶೀಲಿಸಿ ಟಿಪ್ಪಣಿ ಮಂಡಿಸುವುದು ಮತ್ತು ತಾಂತ್ರಿಕ ವಿಷಯಕ್ಕೆ ಸಂಭಂಧಪಟ್ಟ ಕಡತಗಳ ವಿಲೇವಾರಿಗೆ ಸೂಕ್ತ ಕ್ರಮ ಕೈಗೊಳ್ಳುವುದು, ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರರವರಿಗೆ ವೃತ್ತದ ತಾಂತ್ರಿಕ ವಿಷಯದಲ್ಲಿ ಸಾರ್ವಜನಿಕ ಮಾಹಿತಿ ಅಧಿಕಾರಿಯಾಗಿ ಕಾರ್ಯನಿರ್ವಹಿಸುವುದು ಹಾಗೂ ಬೆಂಗಳೂರು ಪೂರ್ವ ವೃತ್ತ ವ್ಯಾಪ್ತಿಯ ಪ್ರತಿ ತಿಂಗಳ ಪ್ರಗತಿ ವರದಿಯನ್ನು ತಯಾರಿಸಿ ಅಮುವಿಪ ಬೆಂಗಳೂರು ಉತ್ತರ ಇವರಿಗೆ ಸಲ್ಲಿಸುವದು. ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು ರವರ ಕಾರ್ಯವ್ಯಾಪ್ತಿಯ ತಾಂತ್ರಿಕ ಕಡತಗಳ ಸಂರಕ್ಷಣೆಯ ಉಸ್ತುವಾರಿಯನ್ನು ನಿರ್ವಹಿಸುತ್ತಿರುತ್ತಾರೆ.

**ಆಡಳಿತ ವಿಭಾಗ:**

1. **ಅಧೀಕ್ಷಕರು:**

ಹಾಜರಾತಿ ಪುಸ್ತಕದ ನಿರ್ವಹಣೆ, ಕಛೇರಿ ಖರ್ಚಿನ ವರದಿ, (62-ಬಿ) 0043 ಕಂದಾಯ ಚಲನ್ ವರದಿಯ ನಿರ್ವಹಣೆ ಅಧಿಕಾರಿಗಳ ಹಾಗೂ ಸಿಬ್ಬಂದಿಯವರ ಸೇವಾ ಪುಸ್ತಕ ನಿರ್ವಹಣೆ, ಹೆಚ್. ಆರ್. ಎಂ.ಎಸ್. ಮೂಲಕ ಅಧಿಕಾರಿಗಳ/ ಸಿಬ್ಬಂದಿ ವೇತನ ಬಿಲ್ ಇತರೆ ಬಿಲ್ಲುಗಳ ತಯಾರಿಕೆ, ಹಾಗೂ ಅನುದಾನ ಹಂಚಿಕೆ ಹಾಗೂ ಆಡಳಿತಾತ್ಮಕ ವಿಷಯಗಳಲ್ಲಿ ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರಿಗೆ ಸಹಕರಿಸುವುದು. ಆದಾಯ ತೆರಿಗೆ, ಟಿ.ಡಿ.ಎಸ್ ಫೈಲ್ ಮಾಡುವುದು. ಮಾಹಿತಿ ಹಕ್ಕು ಅಧಿನಿಯಮಕ್ಕೆ ಸಂಬಂಧಪಟ್ಟಂತೆ ಕಡತಗಳನ್ನು ನಿರ್ವಹಿಸುವುದು. ಆಡಳಿತ. ಅಕೌಂಟೆಂಟ್ ಜನರಲ್‌ರವರ ಲೆಕ್ಕ ತಪಾಸಣೆಗೆ ಉತ್ತರಿಸುವುದು. ಆಡಳಿತ ಮತ್ತು ತೆರಿಗೆ ವಿಷಯಕ್ಕೆ ಸಂಬಂಧಿಸಿದ ಕಛೇರಿಯ ದಾಖಲೆಗಳ ಮೇಲ್ವಿಚಾರಣೆ ಮತ್ತು ನಿರ್ವಹಣೆ ಮತ್ತು ಹಿರಿಯ ಅಧಿಕಾರಿಗಳು ಸೂಚಿಸುವ ಇತರೆ ಕಾರ್ಯಗಳನ್ನು ನಿರ್ವಹಿಸುವುದು.

2. **ಪ್ರದಸ:**

ರಾಜಸ್ವ ಕಂದಾಯ ಸ್ವೀಕೃತಿ, ನಗದು ಪುಸ್ತಕ ನಿರ್ವಹಣೆ ಮತ್ತು ಪರಿಪಾಲನೆ. ಸ್ವೀಕೃತಿಗೊಂಡಂತಹ ನಗದನ್ನು ಖಜಾನೆಗೆ ಸಂದಾಯ ಮಾಡುವುದು. ಖರ್ಚುವೆಚ್ಚಗಳ ಪಟ್ಟಿಯನ್ನು ತಯಾರಿಸುವುದು, ರೆವಿನ್ಯೂ ರಿಕನ್ಸಿಲೇಷನ್ (ನಾನ್ ಪ್ಲಾನ್ 0043) ವರದಿ ತಯಾರಿಸುವುದು.

ಅಧಿಕಾರಿಗಳ/ಸಿಬ್ಬಂದಿಗಳ ವೇತನ ಬಿಲ್ಲುಗಳು, ಕಚೇರಿ ಸಿಬ್ಬಂದಿ ಪ್ರಯಾಣ, ಸಾದಿಲ್ವಾರು ಇತ್ಯಾದಿಗಳ ಬಿಲ್ಲುಗಳನ್ನು ತಯಾರಿಸಿ ಖಜಾನೆಗೆ ಸಲ್ಲಿಸುವುದು. ಕಚೇರಿಗೆ ಸಂಬಂಧಿಸಿದಂತೆ ಮೇಲಾಧಿಕಾರಿಗಳು ಸೂಚಿಸಿದ ಇತರೆ ಕೆಲಸ ಕಾರ್ಯಗಳನ್ನು ನಿರ್ವಹಿಸುವುದು. ಹಾಗೂ ಮೇಲಾಧಿಕಾರಿಗಳು ಸೂಚಿಸುವ ಇತರೆ ಕೆಲಸ ಕಾರ್ಯಗಳು. ಆಡಳಿತ ವಿಷಯಗಳ ಬಗ್ಗೆ ಇರುವ ಕಡತಗಳ ಅಭಿಲೇಖಾಲಯದ ಉಸ್ತುವಾರಿಯಾಗಿ ಕಾರ್ಯ ನಿರ್ವಹಿಸುತ್ತಾರೆ.

೩. **ದ್ವಿತೀಯ ದರ್ಜೆ ಸಹಾಯಕರು:**

ಸ್ವೀಕೃತಿ ಮತ್ತು ರವಾನೆ ರಿಜಿಸ್ಟರ್ ಸ್ಟಾಂಪ್ ಲೆಕ್ಕ ಪತ್ರ ರಿಜಿಸ್ಟರ್ ನಿರ್ವಹಣೆ- ಪತ್ರಗಳನ್ನು ದಾಖಲಿಸುವುದು ಹಾಗೂ ರವಾನಿಸುವುದು ತಾಂತ್ರಿಕ / ತಾಂತ್ರಿಕೇತರ ಕಡತಗಳ ನಿರ್ವಹಣೆ, ವಿದ್ಯುತ್ ತೆರಿಗೆ ' ಜಿ' ಯ ರಿಜಿಸ್ಟರ್ ನಿರ್ವಹಣೆ, ಚಲನ ವಲನ ರಿಜಿಸ್ಟರ್ ನಿರ್ವಹಣೆ, ಕಚೇರಿ ಮುಖ್ಯಸ್ಥರ ಸಲಹೆ ಮೇರೆಗೆ ಇನ್ನಿತರ ಅಡಳಿತಾತ್ಮಕ ಕಾರ್ಯ ನಿರ್ವಹಿಸುವುದು ಮತ್ತು ಹಿರಿಯ ಅಧಿಕಾರಿಗಳು ಸೂಚಿಸುವ ಇತರೆ ಕಾರ್ಯಗಳನ್ನು ನಿರ್ವಹಿಸುವುದು.

4. **ಗ್ರೂಪ್ ಡಿ ನೌಕರರು**: ಕಚೇರಿ ಮುಖ್ಯಸ್ಥರು ಮತ್ತು ಹಿರಿಯ ಅಧಿಕಾರಿಗಳು ಸೂಚಿಸುವ ಕೆಲಸಗಳನ್ನು ನಿರ್ವಹಿಸುವುದು.

5. **ಹೆಲ್ಪರ್**: ಕಚೇರಿ ಮುಖ್ಯಸ್ಥರು ಮತ್ತು ಹಿರಿಯ ಅಧಿಕಾರಿಗಳು ಸೂಚಿಸುವ ಕೆಲಸಗಳನ್ನು ನಿರ್ವಹಿಸುವುದು.

6. **ವಾಹನ ಚಾಲಕರು**: ಕಚೇರಿ ಮುಖ್ಯಸ್ಥರು ಮತ್ತು ಹಿರಿಯ ಅಧಿಕಾರಿಗಳು ಸೂಚಿಸುವ ಕೆಲಸಗಳನ್ನು ನಿರ್ವಹಿಸುವುದು.

7. **ಗಣಕ ಯಂತ್ರ ಆಪರೇಟರ್**: ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು ಹಾಗೂ ಮತ್ತು ಹಿರಿಯ ಅಧಿಕಾರಿಗಳು ಸೂಚಿಸುವ ಕೆಲಸ ಕಾರ್ಯಗಳು ಮತ್ತು ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರ ಕಚೇರಿಗೆ ಬರುವ ಪತ್ರ ಮತ್ತು ಕಡತಗಳ ಚಲನವಲನಗಳನ್ನು ನಿರ್ವಹಿಸುವುದು. ಕಚೇರಿಯ ಎಲ್ಲಾ ಕಾಗದ ಪತ್ರಗಳನ್ನು ಬೆರಳಚ್ಚು ಮಾಡುವುದು.

4. **ಮೇಲ್ವಿಚಾರಣೆ ಮತ್ತು ಹೊಣೆಗಾರಿಕೆಯ ಮಾರ್ಗಗಳು ಸೇರಿದಂತೆ ತೀರ್ಮಾನ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಅನುಸರಿಸಬೇಕಾದ ಕಾರ್ಯ ವಿಧಾನ: –**

ಇಲಾಖೆಯ ಕಚೇರಿಯಲ್ಲಿ ಸಲ್ಲಿಕೆಯಾಗುವ ಅರ್ಜಿಗಳನ್ನು ಸಂಬಂಧಿಸಿದ ಅಧಿಕಾರಿಗಳು ನೀಲಿನಕ್ಷೆ ಪರಿಶೀಲಿಸುತ್ತಾರೆ, ನ್ಯೂನ್ಯತೆಗಳನ್ನು ಗ್ರಾಹಕರಿಗೆ ತಿಳಿಸಿ ಸರಿಪಡಿಸಿದ ನಕ್ಷೆಗಳನ್ನು ಅನುಮೋದನೆ ಮಾಡುತ್ತಾರೆ. ಗ್ರಾಹಕರಿಂದ ಸಮಾಪನಾ ವರದಿ ಸ್ವೀಕೃತ ಗೊಂಡನಂತರ, ಪ್ರಥಮ ಪರಿವೀಕ್ಷಣೆ ನೆಡೆಸಿ ಮುಂದಿನ ಕ್ರಮ ಕೈ ಗೊಳ್ಳಲಾಗುತ್ತದೆ.

5. **ಇಲಾಖಾ ಕಾರ್ಯಗಳ ನಿರ್ವಹಣೆಗೆ ರೂಪಿಸಿರುವ ಸೂತ್ರಗಳು:–**

ವಿದ್ಯುತ್ ಪರಿವೀಕ್ಷಣಾಲಯ ಇಲಾಖೆಯು ತನ್ನ ಕಚೇರಿಯ ಕೆಲಸ ಸೂಸೂತ್ರವಾಗಿ ನಿರ್ವಹಿಸಲು ಇಲಾಖಾ ಪರಿವೀಕ್ಷಣಾ ಕೈಪಿಡಿ, ವಿದ್ಯುತ್ ಬಳಕೆ ಮತ್ತು ಮಾರಾಟ ಮೇಲಣ ತೆರಿಗೆ–1959 ಮತ್ತು ಅಧಿನಿಯಮ 2014, ತಿದ್ದುಪಡಿ ವಿದೇಯಕ –2013 ಮತ್ತು 2018 ಕೈಪಿಡಿ, ಲಿಫ್ಟ್ ಅಧಿನಿಯಮ ಮತ್ತು ನಿಯಮಗಳು –2012 ಮತ್ತು 2015 ಕೈಪಿಡಿಗಳನ್ನು ಮತ್ತು ಕರ್ನಾಟಕ ಸರ್ಕಾರದಿಂದ ಸೃಜನೆಗೊಂಡ ಕಚೇರಿ ನಿಯಮಗಳನ್ನು ಪಾಲಿಸಲಾಗುತ್ತದೆ.

**6. ಇಲಾಖಾ ಕಾರ್ಯ ನಿರ್ವಹಿಸುವುದಕ್ಕೆ ಬಳಸುವ ನಿಯಮಗಳು ಅನುಸೂಚಿಗಳು, ಕೈಪಿಡಿ ಮತ್ತು ದಾಖಲೆಗಳು**

1) ಕೆ.ಸಿ.ಎಸ್.ಆರ್ – 1958.
2) ಕೆ.ಎಫ್.ಸಿ– 1958,
3) ಕೆ.ಟಿ.ಸಿ.
4) ಆಯ ವ್ಯಯ ಕೈಪಿಡಿ–1958.
5) ಕಚೇರಿ ಕಾರ್ಯ ವಿಧಾನ ಕೈಪಿಡಿ.
6) ಕೆ.ಸಿ.ಎಸ್ (ಸಾಮಾನ್ಯ ನೇಮಕಾತಿ) 1977.
7) ಕೆ.ಸಿ.ಎಸ್ (ಪ್ರೋಬೇಷನ್) 1977.
8) ಕೆ.ಸಿ.ಎಸ್ (ಸಿಸಿಎ) ನಿಯಮಗಳು– 1957.
9) ಕೆ.ಸಿ.ಎಸ್ (ಕಾಂಡಕ್ಟ್) ನಿಯಮಗಳು– 1966.
10 ಕೆ.ಸಿಎಸ್ (ಜೇಷ್ಟತಾ) ನಿಯಮಗಳು–1978.
11) ಕೆ.ಸಿ.ಎಸ್ (ಪಿಪಿಪಿ) ಆಕ್ಟ್ 1973 ಮತ್ತು ನಿಯಮಗಳು– 1978.
12) ಭಾರತೀಯ ವಿದ್ಯುತ್ ಕಾಯ್ದೆ – 2003.
13) ಕೇಂದ್ರಿಯ ವಿದ್ಯುಚ್ಛಕ್ತಿ ಪ್ರಾಧಿಕಾರ (ಸುರಕ್ಷತಾ ಹಾಗೂ ವಿದ್ಯುತ್ ಪೂರೈಕೆಗೆ ಸಂಬಂಧಿಸಿದ) ಅಧಿನಿಯಮಗಳು, 2010.
14) ಕರ್ನಾಟಕ ಸಿನಿಮ (ನಿಯಂತ್ರಣ) ಕಾಯ್ದೆ 1964 ಮತ್ತು ನಿಯಮಗಳು 2014.
15) ಕರ್ನಾಟಕ ಲಿಫ್ಟ್ ಕಾಯ್ದೆ–2014 ಮತ್ತು ನಿಯಮಗಳು – 2015.
16) ಕರ್ನಾಟಕ ಎಕ್ಷಿಬಿಷನ್ ಆನ್ ಟಿವಿ ತ್ರೂ ವಿಸಿಆರ್ ಆರ್ ಲೇಸರ್ ಡಿಸ್ಕ್ ( ನಿಯಂತ್ರಣ) ನಿಯಮಗಳು– 1984.
17) ಕರ್ನಾಟಕ ವಿದ್ಯುಚ್ಛಕ್ತಿ ಬಳಕೆ ಮತ್ತು ಮಾರಾಟದ ಮೇಲಿನ ತೆರಿಗೆ ಕಾಯ್ದೆ 1959 ಮತ್ತು ನಿಯಮಗಳು– 2014.
18) ನ್ಯಾಷನಲ್ ಎಲೆಕ್ಟ್ರಿಸಿಟಿ ಕೋಡ್ -2011.
19) ಕಚೇರಿ ಕೈಪಿಡಿ.

**7. ಆಡಳಿತಕ್ಕೆ ಸಂಬಂಧಪಟ್ಟಂತೆ ನಿರ್ವಹಿಸಿರುವ ರಿಜಿಸ್ಟರುಗಳು ಮತ್ತು ಕಡತಗಳು:**

1. ಸೇವಾ ಪುಸ್ತಕಗಳು ಹಾಗೂ ವೇತನ ರಿಜಿಸ್ಟರ್‌ಗಳು.
2. ವೇತನ ಸೆಳೆತ: ಸಾಲ ವಸೂಲಿ ಮುಂಗಡಗಳು ಇದಕ್ಕೆ ಸಂಬಂಧಪಟ್ಟ ರಿಜಿಸ್ಟರುಗಳು.
3. ವೇತನ ಬಟವಾಡೆ ಹಾಗೂ ಪ್ರವಾಸ ಭತ್ಯೆ ಹಣ ಬಟವಾಡೆ ಪುಸ್ತಕ.
4. ಬಿಲ್ ರಿಜಿಸ್ಟರ್‌ಗಳು.
5. ಗಳಿಕೆ ರಜೆ ನಗದೀಕರಣ ಮತ್ತು ರಜಾ ಮಂಜೂರಾತಿ ರಿಜಿಸ್ಟರ್.
6. ಆಡಳಿತ ಮತ್ತು ಕೋರ್ಟ್ ಕೇಸ್ ಫೈಲ್.
7. ಅನುದಾನ ಅಂದಾಜು ಮತ್ತು ಅನುದಾನ ಹಂಚಿಕೆ ರಿಜಿಸ್ಟರ್‌ಗಳು.
8. ಕಚೇರಿ ವೆಚ್ಚ ರಿಜಿಸ್ಟರ್‌ಗಳು.
9. ಆಡಳಿತ ವಿಷಯಕ್ಕೆ ಸಂಬಂಧಪಟ್ಟ ಕಡತಗಳು.
10. ವೈದ್ಯಕೀಯ ವೆಚ್ಚ ಮರುಪಾವತಿ ಕಡತಗಳು.
11. ಸ್ವೀಕೃತಿ ರವಾನೆ ರಿಜಿಸ್ಟರ್‌ಗಳು.
12. ಸ್ಟಾಂಪ್ ಅಕೌಂಟ್ಸ್ ರಿಜಿಸ್ಟರ್‌ಗಳು.
13. ಸಾಮಾನ್ಯ ಆತಳಿತಾತ್ಮಕ ಸುತ್ತೋಲೆಗಳ ಕಡತ.
14. ಕೋರ್ಟ್ ಕೇಸ್ ಕಡತ.
15. ಆರ್. ಸಿ. ಬಿ ಫೈಲ್.
16. ನಗದು ಪುಸ್ತಕ ಮತ್ತು ರಶೀದಿ ಪುಸ್ತಕಗಳು.
17. ಖಾಯಂ ಮುಂಗಡ ರಿಜಿಸ್ಟರುಗಳು.
19. ಪೀಠೋಪಕರಣ ಹಾಗೂ ಲೈಬ್ರರಿ ಪುಸ್ತಕಗಳ ರಿಜಿಸ್ಟರ್‌ಗಳು.

೨೦. ಸಾದಿಲ್ವಾರು ಬಿಲ್ಲುಗಳ ಕಡತಗಳು.
೨1. ಆರ್.ಟಿ.ಐ. ಕಡತ ಮತ್ತು ರಿಜಿಸ್ಟರ್‌ಗಳು.
೨೨. ಹಾಜರಾತಿ ಪುಸ್ತಕಗಳು.
೨೩. ಚಲನ ವಲನ ರಿಜಿಸ್ಟರ್‌ಗಳು.
೨೪. ನಗದು ಘೋಷಣ ರಿಜಿಸ್ಟರ್‌ಗಳು.
೨೫. ಕಚೇರಿ ಆದೇಶ ಪುಸ್ತಕಗಳು.
೨೬. ಬಿಲ್ ರಿಜಿಸ್ಟರ್‌ಗಳು.

**೮. ಇಲಾಖೆಯು ಹೊಂದಿರುವ ದಸ್ತಾವೇಜುಗಳ ಪ್ರವರ್ಗಗಳ ವಿವರ ಪಟ್ಟಿ:-**
ಅ) ಸೇವಾ ಪುಸ್ತಕಗಳು ಮತ್ತು ಬಡ್ತಿ ವಹಿ.
ಆ) ವೇತನ ವಹಿ.
ಇ) ವೇತನ ಮತ್ತು ಪ್ರಯಾಣ ಭತ್ಯೆ ವಹಿ.
ಈ) ಬಿಲ್ ವಹಿ.
ಉ) ಗಳಿಕೆ ರಜೆ ನಗದಿಕರಣ ಮತ್ತು ರಜೆ ಮಂಜೂರಾತಿ ವಹಿ.
ಋ) ಸಾದಿಲ್ವಾರು ವಹಿ
ಎ) ಸ್ವೀಕೃತಿ ಮತ್ತು ರವಾನೆ ವಹಿ.
ಏ) ಸಾಮಾನ್ಯ ಆದೇಶ ಮತ್ತು ಸುತ್ತೋಲೆಗಳು.
ಅ) ನ್ಯಾಯಾಲಯ ವ್ಯಾಜ್ಯ ಕಡತ.
ಆ) ನಗದು ಪುಸ್ತಕ ಮತ್ತು ನಗದು ಪಾವತಿ ಪುಸ್ತಕ.
ಇ) ಮುಂಗಡ ಹಣ ಪಾವತಿ ವಹಿ.
ಈ) ಕಚೇರಿ ಕರ್ಚು ವೆಚ್ಚದ ಕ್ರೋಡಿಕೃತ ೨೦೪೫ ರಿಜಿಸ್ಟ್ರರ್.
ಉ) ಐಪಿಪಿ ಗಳ ವಿದ್ಯುತ್ ಉತ್ಪಾದನಾ ವಿವರಗಳ ವಹಿ.

**೯. ಕೈಪಿಡಿ ವಿಭಾಗ:-**
ಅ) ವಿದ್ಯುತ್ ಸ್ಥಾವರಗಳ ಅಂಕಿ ಅಂಶಗಳ ವಿವರಗಳು.
ಆ) ಲಿಫ್ಟ್ ಸ್ಥಾಪನಾ ಪರವಾನಗಿ ಮತ್ತು ಅನುಮೋದನೆ ಶಿಫಾರಸ್ಸುಗಳ ರಿಜಿಸ್ಟರ್‌ಗಳು.
ಇ) ವಿದ್ಯುತ್ ಅಪಘಾತಗಳ ಅಂಕಿ ಅಂಶಗಳ ರಿಜಿಸ್ಟರ್‌ಗಳು.
ಈ) ಕಚೇರಿ ಗಣಕ ಯಂತ್ರಗಳ ರಿಜಿಸ್ಟರ್‌ಗಳು.
ಉ) ಪ್ರಗತಿ ಪರಿಶೀಲನಾ ಸಭೆಗಳ ರಿಜಿಸ್ಟರ್‌ಗಳು.
ಊ) ಸಾಮಾನ್ಯ ಪತ್ರ ವ್ಯವಹಾರಗಳ ರಿಜಿಸ್ಟರ್‌ಗಳು.
ಋ) ತಾಂತ್ರಿಕ ಸುತ್ತೋಲೆಗಳ ರಿಜಿಸ್ಟರ್‌ಗಳು.
ಎ) ಖಜಾನೆ-೨ ರಲ್ಲಿ ಸ್ವೀಕೃತಗೊಂಡ ಹಣಕಾಸಿನ ವ್ಯವಹಾರಗಳ ನಿರ್ವಹಣೆ.

**1೦. ತಾಂತ್ರಿಕ ವಿಭಾಗ:-**
ಎ) ವಿದ್ಯುತ್ ಸ್ಥಾವರಗಳ ನೀಲಿ ನಕ್ಷೆ ಅನುಮೋದನೆ ರಿಜಿಸ್ಟರ್‌ಗಳು.
ಬಿ) ವಿದ್ಯುತ್ ಸ್ಥಾವರಗಳ ಚಾಲನಾ ಅನುಮೋದನೆ ರಿಜಿಸ್ಟರ್‌ಗಳು.
ಸಿ) ವಾರ್ಷಿಕ ಮಾಹಿತಿ ಹಕ್ಕು ರಿರ್ಟನ್‌ಗಳು – (ಫಾರ್ಮ 1, 2, 3).
ಡಿ) ವಿದ್ಯುತ್ ಅಪಘಾತಗಳ ಪತ್ರ ವ್ಯವಹಾರಗಳ ಮತ್ತು ಸುತ್ತೋಲೆಗಳ ರಿಜಿಸ್ಟರ್‌ಗಳು.
ಇ) ತಾಂತ್ರಿಕ ಪತ್ರ ವ್ಯವಹಾರಗಳ ಮತ್ತು ಸುತ್ತೋಲೆಗಳ ರಿಜಿಸ್ಟರ್‌ಗಳು.

**11. ಇಲಾಖೆಯ ಕಾರ್ಯನೀತಿಯ ರಚನೆ ಅಥವಾ ಅದರ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರೊಡನೆ ಸಮಾಲೋಚಿಸಲು ಅಥವಾ ಅವರ ಪ್ರಾತಿನಿಧ್ಯವಿರುವಂತೆ ಮಾಡಲು ಇರುವಂಥ ವ್ಯವಸ್ಥೆಯ ವಿವರಗಳು**
– ಈ ಇಲಾಖೆಗೆ ಅನ್ವಯಿಸುವುದಿಲ್ಲ.

**12. ಮಂಡಳಿಗಳು, ಪರಿಷತ್ತುಗಳು, ಸಮಿತಿಗಳು ಅಥವಾ ಇತರ ನಿಕಾಯಗಳು ಮತ್ತು ಅದರ ಭಾಗವಾಗಿ ಅಥವಾ ಅದರ ಸಲಹೆಯ ಉದ್ದೇಶಕ್ಕಾಗಿ ರಚಿತವಾದ ಇಬ್ಬರು ಅಥವಾ ಹೆಚ್ಚು ವ್ಯಕ್ತಿಗಳನ್ನೊಳಗೊಂಡ ಮಂಡಳಿಗಳ ಪರಿಷತ್ತುಗಳ, ಸಮಿತಿಗಳ ಮತ್ತು ಇತರ ನಿಕಾಯಗಳ ಸಭೆಗಳು ಸಾರ್ವಜನಿಕರಿಗೆ ಮುಕ್ತವಾಗಿರುತ್ತವೆಯೇ ಅಥವಾ ಅಂತಹ ಸಭೆಗಳ ನಡಾವಳಿಗಳು ಸಾರ್ವಜನಿಕರಿಗೆ ದೊರೆಯುತ್ತವೆಯೇ ಎಂಬುದರ ವಿವರ ಪಟ್ಟಿ**

– ಈ ಇಲಾಖೆಗೆ ಅನ್ವಯಿಸುವುದಿಲ್ಲ.

**13. ಅಧಿಕಾರಿಗಳು ಮತ್ತು ನೌಕರ ನಿರ್ದೇಶಿಕೆ :–**

| ಕ್ರಮ ಸಂಖ್ಯೆ: | ಹುದ್ದೆಯ ವಿಭಾಗ | ಹೆಸರು ಶ್ರೀಯುತ/ಶ್ರೀಮತಿ | ದೂರವಾಣಿ: |
|---|---|---|---|
| 1) | ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು | ಟಿ.ಎಲ್. ಹನುಮಂತನಾಯ್ಕ್ | 080–23422862 |
| 2) | ವಿದ್ಯುತ್ ಪರಿವೀಕ್ಷಕರು | ಸತೀಶ್ ಎನ್ | 080–23422862 |
| 3) | ಉಪ ವಿದ್ಯುತ್ ಪರಿವೀಕ್ಷಕರು | ಉಷಾರಾಣಿ ಟಿ. ಆರ್ | 080–23422862 |
| 4) | ಸಹಾಯಕ ವಿದ್ಯುತ್ ಪರಿವೀಕ್ಷಕರು (ಕಚೇರಿ) | ದೀಪಿಕಾ.ವಿ. | 080–23422862 |
| 5) | ಸಹಾಯಕ ವಿದ್ಯುತ್ ಪರಿವೀಕ್ಷಕರು–1 ಕ್ಷೇತ್ರಿಯ | ವಿಜಯಕುಮಾರ ಕೆ.ಜಿ | 080–23422862 |
| 6) | ಸಹಾಯಕ ವಿದ್ಯುತ್ ಪರಿವೀಕ್ಷಕರು–2 ಕ್ಷೇತ್ರಿಯ | ಖಾಲಿ | 080–23422862 |
| 7) | ಸಹಾಯಕ ವಿದ್ಯುತ್ ಪರಿವೀಕ್ಷಕರು–3 ಕ್ಷೇತ್ರಿಯ | ಖಾಲಿ | 080–23422862 |
| 8) | ಅಧೀಕ್ಷಕರು–1 ಹುದ್ದೆ | ಚಿದಾನಂದ | 080–23422862 |
| 9) | ಪ್ರ ದ ಸ–1 ಹುದ್ದೆ | ಯೋಗೇಶ್ ಬಿ.ಬಿ | 080–23422862 |
| 10) | ದ್ವಿ.ದ.ಸ– 1 ಹುದ್ದೆ | ಖಾಲಿ | 080–23422862 |
| 11) | ದ್ವಿ.ದ.ಸ– 2 ಹುದ್ದೆ | ಖಾಲಿ | 080–23422862 |
| 12) | ಕಂಪ್ಯೂಟರ್ ಆಪರೇಟರ್ ಹುದ್ದೆ | ಕವಿತ (ಕಿಯೋನಿಕ್ಸ್ ಮುಖಾಂತರ ಹೊರಗುತ್ತಿಗೆ ಆಧಾರ) | 080–23422862 |
| 13) | ಗ್ರೂಪ್ 'ಡಿ' ಜವಾನ ಹುದ್ದೆ | ಶಾಂತರಾಜ್ ನಾಯ್ಕ್ ಪಿ( ಹೊರಗುತ್ತಿಗೆ ಆಧಾರ) | 080–23422862 |
| 14) | ವಾಹನ ಚಾಲಕ | ಖಾಲಿ | 080–23422862 |
| 15 | ಸಹಾಯಕರು ಹುದ್ದೆ | ಖಾಲಿ | 080–23422862 |

**14. ಇಲಾಖೆಯ ನಿಯಮಗಳಲ್ಲಿ ಉಪಬಂಧಿಸಿದಂತೆ ಪರಿಹಾರದ ವ್ಯವಸ್ಥೆಯೂ ಸೇರಿದಂತೆ ಅದರ ಪ್ರತಿಯೊಬ್ಬ ಅಧಿಕಾರಿ ಮತ್ತು ನೌಕರರು ಪಡೆಯುವ ತಿಂಗಳ ಗೌರವಧನ:-**

| ಕ್ರಮ ಸಂಖ್ಯೆ | ಹುದ್ದೆಯ ಹೆಸರು | ಮಂಜೂರಾದ ಸಿಬ್ಬಂದಿ | ವೇತನ ಶ್ರೇಣಿ |
|---|---|---|---|
| 2 | ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು | 01 | 74400-109600 |
| 3 | ವಿದ್ಯುತ್ ಪರಿವೀಕ್ಷಕರು | 01 | 52650-97100 |
| 5 | ಉಪ ವಿದ್ಯುತ್ ಪರಿವೀಕ್ಷಕರು | 01 | 52650-97100 |
| 6 | ಸಹಾಯಕ ವಿದ್ಯುತ್ ಪರಿವೀಕ್ಷಕರು | 04 | 43100-83900 |
| 8 | ಅಧೀಕ್ಷಕರು | 01 | 37900-70850 |
| 10 | ಪ್ರ ದ ಸ | 01 | 27650-52650 |
| 11 | ದ್ವಿ ದ ಸ | 02 | 21400-42000 |
| 12 | ಕಂಪ್ಯೂಟರ್ ಆಪರೇಟರ್ | 01 | ಹೊರಗುತ್ತಿಗೆ |
| 13 | ವಾಹನ ಚಾಲಕ | 01 | 17000-28900 |
| 14 | ಗ್ರೂಪ್ 'ಡಿ' ಜವಾನ | 01 | ಹೊರಗುತ್ತಿಗೆ |
| | ಹೆಲ್ಪರ | 01 | ಹೊರಗುತ್ತಿಗೆ |
| **ಒಟ್ಟು** | | **14** | |

**15 ಎಲ್ಲಾ ಯೋಜನೆಗಳ ವಿವರಗಳನ್ನು ಸೂಚಿಸುವ ಪ್ರಸ್ತಾವಿತ ವೆಚ್ಚಗಳನ್ನು ಮತ್ತು ಮಾಡಲಾದ ಬಟವಾಡೆಗಳ ವರದಿಯನ್ನು ಸೂಚಿಸಿ ಅದರ ಪ್ರತಿಯೊಂದು ಏಜೆನ್ಸಿಗೆ ಹಂಚಿಕೆ ಮಾಡಲಾದ ಆಯವ್ಯಯ:**

- ಈ ಇಲಾಖೆಗೆ ಅನ್ವಯಿಸುವುದಿಲ್ಲ.

**16 ಹಂಚಿಕೆ ಮಾಡಲಾದ ಮೊಬಲಗನ್ನೊಳಗೊಂಡು ಸಹಾಯಧನ ಕಾರ್ಯಕ್ರಮಗಳ ಜಾರಿಯ ವಿಧಾನವನ್ನು ಮತ್ತು ಅಂತಹ ಕಾರ್ಯಕ್ರಮಗಳ ಫಲಾನುಭವಿಗಳ ವಿವರ**

- ಈ ಇಲಾಖೆಗೆ ಸಂಬಂಧಿಸಿರುವುದಿಲ್ಲ.

**17 ನೀಡಿರುವ ರಿಯಾಯತಿಗಳನ್ನು ಅನುಮತಿ ಪತ್ರಗಳನ್ನು ಅಥವಾ ಅಧಿಕಾರ ಪತ್ರಗಳನ್ನು ಪಡೆಯುವವರ ವಿವರ**

- ಈ ಇಲಾಖೆಗೆ ಅನ್ವಯಿಸುವುದಿಲ್ಲ.
-

**18 ಕಛೇರಿಯ ಬಳಿ ಲಭ್ಯವಿರುವ ಅಥವಾ ಅದು ಹೊಂದಿರುವ ವಿದ್ಯುನ್ಮಾನ ರೂಪಕ್ಕೆ ಪರಿವರ್ತಿಸಿರುವ, ಮಾಹಿತಿಗೆ ಸಂಬಂಧಿಸಿದ ವಿವರ**

- ಈ ಇಲಾಖೆಗೆ ಅನ್ವಯಿಸುವುದಿಲ್ಲ.

**19 ಸಾರ್ವಜನಿಕ ಉಪಯೋಗಕ್ಕಾಗಿ ಗ್ರಂಥಾಲಯವನ್ನು ಅಥವಾ ವಾಚನಾಲಯವನ್ನು ನಿರ್ವಹಿಸುತ್ತಿದ್ದಲ್ಲಿ ಅದರ ಕೆಲಸದ ಸಮಯವನ್ನೊಳಗೊಂಡ ಮಾಹಿತಿ ಪಡೆಯಲು ಸಾರ್ವಜನಿಕರಿಗೆ ಲಭ್ಯವಿರುವ ಸೌಲಭ್ಯಗಳ ವಿವರ.**

- ಈ ಇಲಾಖೆಗೆ ಸಂಬಂಧಿಸಿರುವುದಿಲ್ಲ

**20 ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರುಗಳು, ಪದನಾಮಗಳು ಮತ್ತು ಇತರ ವಿವರ ನಿಯಮಿಸಬಹುದಾದಂತಹ ಇತರ ಮಾಹಿತಿಯನ್ನು ಪ್ರಕಟಿಸತಕ್ಕದ್ದು ಮತ್ತು ಆ ತರುವಾಯ ಪ್ರತಿ ವರ್ಷ ಈ ಪ್ರಕಟಣೆಗಳನ್ನು ಅಂದಿನವರೆಗೆ ಪರಿಷ್ಕರಿಸತಕ್ಕದ್ದು.**

| ಕ್ರಮ ಸಂಖ್ಯೆ | ಅಧಿಕಾರಿಯ ಹುದ್ದೆ | ಮಾಹಿತಿ ಹಕ್ಕು 2005 ರ ಪ್ರಕಾರ ಹುದ್ದೆ | ದೂರವಾಣಿ |
|---|---|---|---|
| 1 | ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಪೂರ್ವ ವೃತ್ತ ಕಚೇರಿ | ವೃತ್ತ ಕಚೇರಿ ಪ್ರಥಮ ಅಪೀಲು ಅಧಿಕಾರಿ | 080-23422862 |
| 2 | ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಪೂರ್ವ | ಸಾರ್ವಜನಿಕ ಮಾಹಿತಿ ಅಧಿಕಾರಿ, ಬೆಂಗಳೂರು ಪೂರ್ವ ವೃತ್ತ (ತಾಂತ್ರಿಕ) | 080-23422862 |
| 3 | ಉಪ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಪೂರ್ವ | ಸಾರ್ವಜನಿಕ ಮಾಹಿತಿ ಅಧಿಕಾರಿ, ಬೆಂಗಳೂರು ಪೂರ್ವ ವೃತ್ತ (ತಾಂತ್ರಿಕ) | 080-23422862 |
| 6 | ಸಹಾಯಕ ವಿದ್ಯುತ್ ಪರಿವೀಕ್ಷಕರು (ಕಚೇರಿ) ಬೆಂಗಳೂರು ಪೂರ್ವ ಕಚೇರಿ | ಉಮುವಿಪ ಕಾರ್ಯವಾಪ್ತಿಗೆ ಸಂಬಂಧಿಸಿದಂತೆ ಸಾರ್ವಜನಿಕ ಮಾಹಿತಿ ಅಧಿಕಾರಿ, ಬೆಂಗಳೂರು ಪೂರ್ವ ವೃತ್ತ (ತಾಂತ್ರಿಕ) | 080-23422862 |
| 7 | ಸಹಾಯಕ ವಿದ್ಯುತ್ ಪರಿವೀಕ್ಷಕರು- ಕ್ಷೇತ್ರಿಯ-1 ಬೆಂಗಳೂರು ಪೂರ್ವ ಕಚೇರಿ | ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ, ಪೂರ್ವ ವೃತ್ತ (ತಾಂತ್ರಿಕ) | 080-23422862 |
| 8 | ಅಧೀಕ್ಷಕರು, ಬೆಂಗಳೂರು ಪೂರ್ವ ಕಚೇರಿ | ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ (ಬೆಂಗಳೂರು ಪೂರ್ವ ಕಚೇರಿ ಆಡಳಿತ ವಿವರ) | 080-23422862 |

**21 ಸಾರ್ವಜನಿಕರಿಗೆ ಸಂಬಂಧಿಸಿದ ಪ್ರಮುಖ ಕಾರ್ಯನೀತಿಗಳನ್ನು ರೂಪಿಸುವಾಗ ಅಥವಾ ನಿರ್ಧಾರ ಗಳನ್ನು ಘೋಷಿಸುವಾಗ ಎಲ್ಲಾ ಸುಸಂಗತ ಸಂಗತಿಗಳನ್ನು ಪ್ರಕಟಿಸತಕ್ಕದ್ದು. ಆಡಳಿತಾತ್ಮಕ ಅಥವಾ ಅರೆನ್ಯಾಯಿಕ ಸ್ವರೂಪದ ನಿರ್ಣಯಗಳಿಂದ ಬಾಧಿತರಾದ ವ್ಯಕ್ತಿಗಳಿಗೆ ಅದರ ಕಾರಣಗಳನ್ನು ಒದಗಿಸತಕ್ಕದ್ದು.**

- ಈ ಇಲಾಖೆಗೆ ಅನ್ವಯಿಸುವುದಿಲ್ಲ

ಸಹಿ/-

ಟಿ. ಎಲ್ ಹನುಮಂತನಾಯ್ಕ್
ಬೆಂಗಳೂರು ಪೂರ್ವ ವೃತ್ತ ಕಚೇರಿ
ಅಪೀಲು ಅಧಿಕಾರಿ ಹೆಸರು ಮತ್ತು ಸಹಿ